**(ದಿನಾಂಕಃ 05.08.2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)**

ಮುಂದುವರಿದ ಮುಖ್ಯ ವಿಚಾರಣೆ ಃ

(ನಾನು ನನ್ನ ವಿವರವಾದ ಕೋರ್ಟ್ ಕಮಿಷನರ್ ವರದಿಯನ್ನು ಈಗಾಗಲೇ ಸಲ್ಲಿಸಿದ್ದು ಅದನ್ನು ನನ್ನ ಮುಂದುವರಿದ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಎಂದು ಪರಿಗಣಿಸಬೇಕು ಎಂದು ಪಾರ್ಥಿಸಿದ್ದರಿಂದ ಸದರಿ ವರದಿಯನ್ನು ತನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಎಂದು ಪರಿಗಣಿಸಲಾಯಿತು)

1. ನಾನು ಈ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯದಿಂದ ಈ ಪ್ರಕರಣದ ಭೂ ನಿರ್ದೇಶಕರು ಸಹಾಯಕ ಕಚೇರಿಗೆ ಪಾರ್ಟೀಷನ್ ಡಿಕ್ರಿಯನ್ನು ಅಳತೆ ಮಾಡಲು ಕಚೇರಿಗೆ ಬಂದಿರುತ್ತದೆ. ಮಾನ್ಯ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ವಾರಂಟ್ ಅನ್ನು ಜಾರಿ ಗೊಳಿಸಲು ಸದರಿ ಕಡತವನ್ನು ನನಗೆ ಹಂಚಿಕೆ ಮಾಡಿರುತ್ತಾರೆ.

2. ನಾನು ಸದರಿ ಪ್ರಕರಣದ ಕಡತವನ್ನು ಕಚೇರಿಯಲ್ಲಿ ಪರಿಶೀಲಿಸಿ ಅದಕ್ಕೆ ಸಂಬಂಧಪಟ್ಟ ಸದರಿ ಪ್ರಕರಣದ ದಾವಾ ಸ್ವತ್ತು ತಮ್ಮಡಿಕೊಪ್ಪ ಗ್ರಾಮದ ಸರ್ವೆ ನಂ 28/2 ಕ್ಕೆ ಸಂಬಧಪಟ್ಟಿರುತ್ತದೆ.

3. ಅದಕ್ಕೆ ಸಂಬಂಧಪಟ್ಟ ಎಲ್ಲ ಸೂಕ್ತವಾದ ದಾಖಲೆಗಳನ್ನು ಪಡೆದುಕೊಂಡು ನಿಯಮಾನುಸಾರವಾಗಿ ಅಂಚೇ ಮೂಲಕ ಸದರಿ ಪ್ರಕರಣದ ಅರ್ಜಿದಾರರಾದ ವೇದಾಕ್ಷಿ ಮತ್ತು ರೇಖ ಮತ್ತು ಎದುರುದಾರರಾದ ಜಿ. ನಾಗಪ್ಪ ರವರಿಗೆ ದಿನಾಂಕಃ 26.03.2026 ರ ನೋಟಿಸ್ ನಲ್ಲಿ ಅಳತೆ ದಿನಾಂಕವನ್ನು ನಮೂದಿಸಿ ಕಳುಹಿಸಿರುತ್ತೇನೆ. ಸದರಿ ನೋಟಿಸ್ ಮತ್ತು ಅಂಚೇ ರಶೀಧಿಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ-1 ಎಂದು ಗುರುತಿಸಲಾಯಿತು.

4. ನಾನು ನೋಟಿಸ್ ನಲ್ಲಿ ಹೇಳಿದ ದಿನಾಂಕದಂದು ದಾವಾ ಸ್ವತ್ತು ತಮ್ಮಡಿಕೊಪ್ಪ ಗ್ರಾಮದ ಸರ್ವೆ ನಂ 28/2 ಕ್ಕೆ ಹೋಗಿ ಹಾಜರಾಗಿರುತ್ತೇನೆ. ಸದರಿ ಪ್ರಕರಣದಲ್ಲಿ ವಾದಿ/ಅರ್ಜಿದಾರರು ಮತ್ತು ಎದುರುದಾರರು ಗೈರು ಹಾಜರಿದ್ದರು.

5. ನಾನು ಸ್ಥಳದಲ್ಲಿ ದೊರೆತ ಮಾಹಿತಿ ಮತ್ತು ಸರ್ವೆ ದಾಖಲೆಗಳ ಆಧಾರದ ಮೇಲೆ ನ್ಯಾಯಾಲಯದ ಆದೇಶದಂತೆ ಸದರಿ ಸರ್ವೆ ನಂ 28/2 ರಲ್ಲಿ ಅಳತೆ ಮಾಡಿ ಅದಕ್ಕೆ ಸಂಬಂಧಪಟ್ಟ ಮಹಜರ್ ಅನ್ನು ಜರುಗಿಸಿ ಕಚೇರಿಗೆ ಬಂದು ನಕ್ಷೆಯನ್ನು ತಯಾರಿಸಿ ನನ್ನ ಕೆಲಸವನ್ನು ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ನನ್ನ ವರದಿಯನ್ನು ಸಲ್ಲಿಸಿರುತ್ತೇನೆ.

6. ಸಾಕ್ಷಿಯು ಸದರಿ ಪಂಚನಾಮೆಯ ಪ್ರತಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಸಿ–2 ಎಂದು ಗುರುತಿಸಲಾಯಿತು. ಸಾಕ್ಷಿಯು ಅಳತೆ ನಕ್ಷೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಸಿ–3 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಎದುರುದಾರರು ಪರ ವಕೀಲರಾದಿ ಶ್ರೀ ವೈ.ಪಿ.ಎಂ ರವರಿಂದಃ

1. ಎದುರುದಾರರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಾಕಾಶ ಕೇಳಿದ್ದು ಸಮಂಜಸವಾದ ಕಾರಣವನ್ನು ಕೊಡದೇ ಇರುವುದರಿಂದ ಪಾಟೀ ಸವಾಲು ಇರುವುದಿಲ್ಲ ಎಂದು ಪರಿಗಣಿಸಲಾಯಿತು.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.